

ವಿದ್ವಾನ್ ವಿಠ್ಠಲ ರಾಮಮೂರ್ತಿ ತಂದೆ ತಾಯಿ



ಕೃಷಿ ಪರಿಸರದಲ್ಲಿ ಓಡಾಡುವ, ಬಾಲ್ಯವನ್ನು ಕಳೆಯುವ ಅವಕಾಶ ನನಗೆ ಸಿಕ್ಕಿದ್ದು ನನ್ನ ಭಾಗ್ಯವೇ ಸರಿ. ಇಂದಿನ ನಗರಗಳಲ್ಲಿ ಬೆಳೆಯುವ ಮಕ್ಕಳನ್ನು ಗಮನಿಸಿದಾಗ ನನಗೆ ಎಂಥಾ ಸಂಪತ್ತು ಒಲಿದು ಬಂದಿತ್ತು ಎಂದು ವಿಸ್ಮಯವಾಗುತ್ತದೆ. ಶಾಲೆಯಿಂದ ಓಡುತ್ತಲೇ ಮನೆಗೆ ಬಂದು, ಅಮ್ಮ ಕೊಟ್ಟದ್ದೇನಾದರೂ ತಿಂದು, ಅಪ್ಪನಿಗೆ ಸಹಾಯ ಮಾಡುತ್ತಿದ್ದೆವು. ನಂತರ ಕತ್ತಲಾಗುತ್ತಲೇ ಸಂಗೀತ ಪಾಠ ಶುರುವಾಗುತ್ತಿತ್ತು. ಸಂಗೀತ ಪಾಠವೆಂದರೆ ನನಗೆ ಇಷ್ಟವೇ ಇರಲಿಲ್ಲ. ಸಂಗೀತ ಹೇಳಿಕೊಡುವ ಮೇಷ್ಟ್ರು ಬಂದರೆ ಓಡಿಹೋಗಿ ಅಟ್ಟದಲ್ಲೋ, ಕೊಟ್ಟಿಗೆಯಲ್ಲೊ ಅವಿತು ಕೂರುತ್ತಿದ್ದೆ. ಅಪ್ಪ ನನ್ನನ್ನು ಹುಡುಕಿಕೊಂಡು ಎಳೆದುತಂದು ಮೇಷ್ಟ್ರು ಮುಂದೆ ಕೂರಿಸುತ್ತಿದ್ದರು. ಬಾಲ್ಯದಲ್ಲಿ ಅಪ್ಪ ಅಮ್ಮ ಯಾವುದು ಮಹತ್ವದ್ದು ಎಂದು ಹೇಳುತ್ತಾರೋ ಅದರ ಮಹತ್ವ ನಿಜವಾಗಿ ಮಕ್ಕಳಿಗೆ ಅರಿವಿರುವುದಿಲ್ಲ. ಕಳೆದು ಹೋದ ಅಂದಿನ ದಿನಗಳು ಚಿನ್ನದ ದಿನಗಳಾಗಿದ್ದವು ಎಂದು ನನಗೆ ಅನಿಸುತ್ತದೆ.

◆ **ಬಾಲ್ಯದಲ್ಲಿ ಸಂಗೀತ ಪಾಠವನ್ನು ಪಡೆದ ಬಳಿಕ ಜಿಲ್ಲೆಯಿಂದ ಹೊರಗೆ ಹೋದದ್ದು ಯಾವಾಗ? ಕಾಲೇಜು ಶಿಕ್ಷಣಕ್ಕೆ ಅವಕಾಶ ಸಿಕ್ಕಿತೇ?**

ಹೌದು. ಹತ್ತನೇ ತರಗತಿಯವರೆಗೆ ಮಾತ್ರ ಊರಿನಲ್ಲಿ ಶಿಕ್ಷಣ ದೊರೆಯಿತು. ನಂತರ ನನ್ನ ಸಂಗೀತ ಶಿಕ್ಷಣ ಚೆನ್ನಾಗಿ ನಡೆಯಬೇಕು ಮತ್ತು ಕಾಲೇಜು ಶಿಕ್ಷಣಕ್ಕೂ ಅವಕಾಶ ದೊರೆಯಬೇಕು ಎಂಬ ಕಾರಣಕ್ಕೆ ನನ್ನನ್ನು ಶಿವಮೊಗ್ಗಕ್ಕೆ ಕಳುಹಿಸಿದರು. ಬಾಲ್ಯದಲ್ಲಿ ನನಗೆ